***ಓ.ಎಸ್.ನಂ.346/2015***
***ಪಿ.ಡಬ್ಲ್ಯೂ-1***

***<u>ದಿಃ 13-11-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>***

***<u>ಮುಖ್ಯ ವಿಚಾರಣೆ ಃ ವಾದಿ ಪರ</u>*** <u>ಶ್ರೀ ಟಿ ಆರ್ ಎಸ್</u> ***<u>ವಕೀಲರಿಂದ</u>***

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ನನ್ನ ವಕೀಲರಿಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

***2. ನಾನು ನ್ಯಾಯಾಲಯಕ್ಕೆ*** ವಸತಿ ಯೋಜನೆಯ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*1* ಎಂದು ಗುರುತಿಸಲಾಯ್ತು. ನಿವೇಶನ ರಹಿತ ಫಲಾನುಭವಿಗಳ ಪಟ್ಟಿಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*2* ಎಂದು ಗುರುತಿಸಲಾಯ್ತು. ಸಬೆಯ ನಡವಳಿಕೆಗಳ ದೃಡೀಕತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*3* ಎಂದು ಗುರುತಿಸಲಾಯ್ತು. ದಿಃ *14-06-1996* ರ ಪ್ರಸ್ತಾವನೆಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*4* ಎಂದು ಗುರುತಿಸಲಾಯ್ತು. ನಕ್ಷೆಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*5* ಎಂದು ಗುರುತಿಸಲಾಯ್ತು. ದಿಃ*05-08-1996* ರಂದು ತಹಶೀಲ್ದಾರ್ ಕಾರ್ಯಾಲಯದ ದೃಡೀಕೃತ ಪ್ರತಿಯ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*6* ಎಂದು ಗುರುತಿಸಲಾಯ್ತು. ದಿಃ *03-06-1996* ರ ಉಪವಿಭಾಗಾಧಿಕಾರಿಗಳು ನೀಡಿದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*7* ಎಂದು ಗುರುತಿಸಲಾಯ್ತು. ರಾಜಸ್ವ ನಿರೀಕ್ಷಕರು ದಿಃ *01-06-1996* ರಂದು ನೀಡಿದ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*8* ಎಂದು ಗುರುತಿಸಲಾಯ್ತು. ಹೇಳಿಕೆಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*9* ಎಂದು ಗುರುತಿಸಲಾಯ್ತು. ಎರಡು ಕಂದಾಯ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-*10* ಮತ್ತು *11* ಎಂದು ಗುರುತಿಸಲಾಯ್ತು. ಮ್ಯುಟೇಷನ್ ರಿಜಿಸ್ಟರಿನ ಎರಡು ದೃಡೀಕೃತ ಪ್ರತಿಗಳನ್ನು ನಿಪಿ-*12* ಮತ್ತು *13* ಎಂದು ಗುರುತಿಸಲಾಯ್ತು. *7* ಪೋಟೋಗಳು ಮತ್ತು ಒಂದು ಸಿಡಿಯನ್ನು ನಿಪಿ-*14* ರಿಂದ *21* ಎಂದು ಗುರುತಿಸಲಾಯ್ತು.

*ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.*

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-
*ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು*
*ಪ್ರ.ದ.ನ್ಯಾ.ದಂ. ರವರು, ತರೀಕೆರೆ.*